ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೊಳಚೆ ಪ್ರದೇಶದ ಜನರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸುವುದು

೨೩೭೭. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ನಗರದಲ್ಲಿ ಗುರುತಿಸಲಾದ ಕೊಳಚೆ ಪ್ರದೇಶಗಳೆಷ್ಟು ?

ಆ) ಈ ಕೊಳಚೆ ಪ್ರದೇಶಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗಿದೆಯೆ ?

ಇ) ಇಲ್ಲದಿದ್ದ ಪಕ್ಷದಲ್ಲಿ ಈ ಕೊಳಚೆ ಪ್ರದೇಶಗಳಿಗೆ ನಾಗರೀಕ ಸೌಲಭ್ಯಗಳನ್ನೊದಗಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೨೦. (ಬಿಜಾಪುರ ನಗರದಲ್ಲಿ ೨೦ ಕೊಳಚೆ ಪ್ರದೇಶಗಳನ್ನು ಗುರ್ತಿಸಲಾಗಿದೆ)

ಆ) ಗುರ್ತಿಸಲ್ಪಟ್ಟಿರುವ ೨೦ ಕೊಳಚೆ ಪ್ರದೇಶಗಳ ಪೈಕಿ ೭ ಕೊಳಚೆ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ತೆಗೆದುಕೊಳ್ಳಲಾಗಿದ್ದು ಇವುಗಳಲ್ಲಿನ ೪ ಪ್ರದೇಶಗಳಲ್ಲಿ ಮುಕ್ತಾಯಗೊಂಡಿದ್ದು. ೨ ಪ್ರದೇಶಗಳಲ್ಲಿ ಕಾರ್ಯ ಪ್ರಗತಿಯಲ್ಲಿದ್ದು ಒಂದರಲ್ಲಿನ ಕಾರ್ಯ ನ್ಯಾಯಾಲಯದಿಂದ ತಡೆಯಾಗಿ ಬಂದ ಕಾರಣ ಸ್ಥಗಿತಗೊಳಿಸಲಾಗಿದೆ.

ಇ) ಉಳಿದ ಕೊಳಚೆ ಪ್ರದೇಶಗಳಿಗೆ ನಾಗರಿಕಕ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲು ಯೋಚಿಸಲಾಗಿದ್ದು, ಈ ವರ್ಷದಲ್ಲಿ ೩ ಕೊಳಚೆ ಪ್ರದೇಶಗಳಲ್ಲಿ ಕಾರ್ಯ ಕೈಗೊಳ್ಳಲು ಯೋಚಿಸಲಾಗಿದೆ.

ಮಸೀದಿಗಳಿಗೆ ವಕ್ಫ್ ಮಂತ್ರು ಹಜ್ ಸಮಿತಿಗಳಿಂದ ಹಣ ಮಂಜೂರಾತಿ

೨೩೭೫. ಶ್ರೀ ಚಂದ್ರಶೇಖರ್ ಮಾಮನಿ (ಪರಸಗಡ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವದತ್ತಿ ತಾಲ್ಲೂಕಿನಲ್ಲಿರುವ ಮಸೀದಿಗಳೆಷ್ಟು ?

ಆ) ಕಳೆದ ೩ ವರ್ಷಗಳಿಂದ ರಾಜ್ಯದಲ್ಲಿ ವಕ್ಫ್ ಮತ್ತು ಹಜ್ ಸಮಿತಿಯಿಂದ ಮಸೀದಿಗಳಿಗೆ ಕೊಡಲಾಗಿರುವ ಹಣವೆಷ್ಟು (ವಿವರ ನೀಡುವುದು).

ಇ) ಸದರಿ ಸಮಿತಿಯು ಸವದತ್ತಿ ತಾಲ್ಲೂಕಿನ ಮಸೀದಿಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು (ಮಸೀದಿಗಳಿಗೆ ಹೆಸರು ಮತ್ತು ವಿವರ ನೀಡುವುದು).

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು).—

ಅ) ೩೩;

ಆ) ರಾಜ್ಯದಲ್ಲಿ ಬಡ ಮಸೀದಿಗಳಿಗೆ ರಾಜ್ಯ ಸರ್ಕಾರದಿಂದ ಮಾತ್ರ ಧನ ಸಹಾಯ ಮಾಡಲಾಗುತ್ತಿದೆ. ವಕ್ಫ್ ಸಮಿತಿಯಾಗಲಿ ಅಥವಾ ಹಜ್ ಸಮಿತಿಯಾಗಲಿ ಕಳೆದ ೩ ವರ್ಷಗಳಿಂದ ಯಾವ ಧನಸಹಾಯವನ್ನೂ ಕೊಟ್ಟಿರುವುದಿಲ್ಲ. ರಾಜ್ಯ ಸರ್ಕಾರದಿಂದ ಕಳೆದ ೩ ವರ್ಷಗಳಲ್ಲಿ ಮಸೀದಿಗಳಿಗೆ ಮಂಜೂರಾದ ಧನ ಸಹಾಯದ ವಿವರ ಈ ಕೆಳಕಂಡಂತಿದೆ.

೧) ೧೯೮೫-೮೬ ರೂ. ೫೦ ಲಕ್ಷಗಳು
೨) ೧೯೮೬-೮೭ ರೂ. ೬೦ ,,
೩) ೧೯೮೭-೮೮ ರೂ. ೬೦ ,,